ಇಂತಹ ಪ್ರಶ್ನೆರೂಪದ ಮಾತುಗಳಲ್ಲಿ ಅಡಗಿರುವ ಹಿರಿದಾದ ಅರ್ಥ, ಸಂದೇಶಗಳು ಸಾಧಕರ ಬಾಳಿಗೆ ಭವ್ಯ ಸೂತ್ರಗಳಂತಿವೆ. ಐದು ನುಡಿಗಳಲ್ಲಿ ಮುಂದುವರಿಯುವ ಈ ಹಾಡಿನಲ್ಲಿ ಇಂತಹ ಸೂತ್ರರೂಪದ ನುಡಿಗಳು ಪ್ರಶ್ನಾರ್ಥಕ ವಾಗಿ ನಮ್ಮ ಹೃದಯವನ್ನು ನಾವೇ ಬಗೆದು ನೋಡಿ ಕೊಳ್ಳುವಂತಹ ಜಿಜ್ಞಾಸೆಗೆ ಹಚ್ಚುತ್ತವೆ.

ಶ್ರೀಗುರುವಿನ ವಚನಸುಧೆಯನ್ನುಂಡು, ಹರನಲ್ಲಿ ವರಭಕ್ತಿ ಯನ್ನು ಪಡೆದ ನಿಜಗುಣರು ಶಂಭುವಿನ ಮುಂದೆ ತಮ್ಮ ಶುದ್ಧಹೃದಯದ ಪ್ರಾರ್ಥನೆಯನ್ನು ನಿವೇದಿಸುತ್ತಾರೆ. ನೈತಿಕ ನಿಷ್ಠೆಯನ್ನು ಮತ್ತಷ್ಟು ದೃಢಗೊಳಿಸಿಕೊಳ್ಳಲು ಶಿವನಲ್ಲಿ ಅನೇಕ ಸುಗುಣ ಸಂತತಿಗಳ ಬೇಡಿಕೆಯನ್ನು ಸಲ್ಲಿಸುತ್ತಾರೆ. ಅವು ಗಳನ್ನು ಈ ಮುಂದಿನ ಗೀತೆಯಲ್ಲಿ ಕಾಣಬಹುದು:

**ಬೇಡುವೆನಭವ ನಿಮ್ಮನು ಭವಭವದೊಳು**
**ಮಾಡೆನಗೊಲಿದು ಸುಗುಣ ಸಂತತಿಯನಿಂತು ।**
**ಎರಡರಡಸಿದ ವೇಳೆಯೊಳು ಧೈರ್ಯವನು ಸಿರಿ**
**ವಡೆದು ಜೀವಿಸುವೆಡೆಯೊಳು ವಿನಯವನು**
**ಕಡು ಜವ್ವನದೊಳು ವಿಕೃತಿದೋರದಿಹುದನು**
**ಪಿಡಿದ ನೇಮವನೆಡೆವಿಡದತಿ ಛಲವನು ॥೧॥**

"ಶಂಭುವಿನೆಡೆಗೆ ಮುನ್ನಡೆಯುವ ಮಾರ್ಗದಲ್ಲಿ ಸಾಕಷ್ಟು ಎಡರುತೊಡರುಗಳು ಬರಲಿ. ಆದರೆ ಅವುಗಳನ್ನು ಗೆಲ್ಲು ವಂತಹ ಧೈರ್ಯವನ್ನು ಕೊಡು" ಎಂದು ಅಭವನಲ್ಲಿ ಪ್ರಾರ್ಥಿಸುತ್ತಾರೆ. "ಸಂಪತ್ತಿನೊಡನೆ ಸದ್ವಿನಯವೂ ನನ್ನದಾಗಲಿ, ಯೌವ್ವನದ ಮಬ್ಬಿನಲ್ಲಿ ಕಾಮಾದಿ ವಿಕಾರಗಳು ತಲೆದೋರ ದಿರಲಿ ಮತ್ತು ಹಿಡಿದ ನಿಯಮವನ್ನು ಬಿಡದೆ ನಡೆಸುವ ಛಲವನ್ನು ಕೊಡು" ಎಂದಿದ್ದಾರೆ. ಇಲ್ಲಿ ಬಸವಣ್ಣನವರ, "ಪರಸತಿ ಪರಧನಗಳನ್ನು ಒಲ್ಲದ ಛಲ ಶರಣಂಗೆ ಬೇಕು" ಎಂಬ ಮಾತನ್ನು ನೆನೆಯಬಹುದು.

ಹೀಗೆಯೇ ಇವರ ಪ್ರಾರ್ಥನೆ ಮುಂದುವರಿಯುತ್ತದೆ. ನಿಜಗುಣರು ಕ್ರಮೇಣ, 'ವಿತರಣದೊಡನೆ ಭೋಗಿಸುವರ್ಥ ದೊದವನು' 'ಕೋಪವಂಟದ ತಪವನು, ಪರವಧುವಿನ ರೂಪುಗಂಡೆಳಸದ ಕರಣ ವಿಜಯವನು', 'ಧರೆಯೊಳತ್ಯಧಿಕ ವೆನಿಪ ಶಾಂತಿ ಮತವನು', 'ಕರುಣವಿದ್ಯೆಗಳುಳ್ಳ ಗುರುಭಜನೆ ಯನು' ಎನ್ನುವ ಕೋರಿಕೆಗಳನ್ನು ವ್ಯಕ್ತಪಡಿಸಿ, ಕೊನೆಗೆ 'ಕಂತುಹರ ಶಂಭುಲಿಂಗ ನಿಮ್ಮಡಿಯ ವರಭಕ್ತಿಯನು' ಬೇಡುತ್ತಾರೆ. ಅರ್ಥ ಅಥವಾ ಧನವು ನಿರಾಕರಿಸುವಂತಹ ವಸ್ತುವಲ್ಲ, ಲೌಕಿಕ ಜೀವನಕ್ಕೆ ಅತ್ಯವಶ್ಯಕವಾದುದು. ಆದರೆ ಯಾವಾಗಲೂ ಅದನ್ನು ಹಂಚಿಕೊಂಡು ಬಳಸಬೇಕು. ಅಂತಹ ಅರ್ಥಸಂಪತ್ತನ್ನು ಕೊಡು ಎಂಬ ಪ್ರಾರ್ಥನೆ ಇಲ್ಲಿದೆ. ಜಪತಪಾದಿಗಳಿಂದ ಶಮದಮಗಳನ್ನು ಸಾಧಿಸಬೇಕೇ ಹೊರ ತಾಗಿ, ಅಲ್ಲಿ ಕೋಪದ, ಅಹಂಕಾರದ ಎಳೆ ಲವಲೇಶವೂ ಇರಕೂಡದು. ಪರಸ್ತ್ರೀಯನ್ನು ಕಂಡು ಅಳುಪದ ಇಂದ್ರಿಯದ ಗೆಲುವನ್ನು ಕರುಣಿಸು ಎಂದು, ಧೈರ್ಯ, ವಿನಯ, ಸಾತ್ವಿಕತೆ ಯಿಂದ ಕೂಡಿದ ಅಭಿಮಾನ, ಛಲ, ಕರಣ ವಿಜಯ ಮುಂತಾದವನ್ನು ಬೇಡುತ್ತಾ ಬಂದು, ಕೊನೆಗೆ ಶಾಂತಿ, ಗುರುಭಜನೆ ಮತ್ತು ಶಂಭುಲಿಂಗನಡಿಯ ವರಭಕ್ತಿಯನ್ನು ಬೇಡಿಕೊಳ್ಳುತ್ತಾರೆ. ನೀತಿಯ ನೆಲೆಗಟ್ಟಿನ ಮೇಲೆ ಭದ್ರವಾಗಿ ಹೆಜ್ಜೆಯೂರಿ ನಿಂತಾಗ, ಮುಂದೆ ಬರಬರುತ್ತಾ ಮನಸ್ಸಿನ ಶಾಂತಿ, ಗುರು ಭಜನೆ ಮತ್ತು ಭಕ್ತಿಯನ್ನು ಹೇಗೆ ಸಾಧಿಸ ಬಹುದು ಎಂಬ ಅಂಶವನ್ನು ನಾವಿಲ್ಲಿ ಗಮನಿಸಬಹುದು.

ಆಂತರಿಕ ಶುದ್ಧತೆಯಿಂದ, ಕಿಂಕರಭಾವದಿಂದ ದೇವನನ್ನು ಕುರಿತು ಪ್ರಾರ್ಥಿಸಿ ಏನನ್ನಾದರೂ ಬೇಡಿದಾಗ, ನಿಸ್ಸಂಶಯವಾಗಿ ಅದು ಸಿದ್ಧಿಸುತ್ತದೆ, ಭಕ್ತಿಯ ಭಾವ ದೃಢವಾಗುತ್ತದೆ. ಪೂಜೆ ಧ್ಯಾನಗಳು ಮನಸ್ಸಿಗೆ ಪರಿಣಾಮಸುಖವನ್ನು ನೀಡುತ್ತವೆ. 'ಆವ ಪುಣ್ಯವೋ ಲಿಂಗಪೂಜಾವಿಧಿಯನುಭಾವವಹುದು ನರಜನ್ಮದೊಳು' ಎಂದು ಒಂದು ಹಾಡಿನಲ್ಲಿ ಲಿಂಗಪೂಜೆ ಮಾಡಿ ಆನಂದ ಹೊಂದುವ ಧನ್ಯತೆಯನ್ನು ಕೊಂಡಾಡಿದರೆ, ಇನ್ನೊಂದು ಹಾಡಿನಲ್ಲಿ, 'ಶರಣಸತಿಯ ಮದುವೆ ಸಂಭ್ರಮ ವನು ನೋಡಿರಮ್ಮ, ಪರಮಾನಂದ ಪಯೋನಿಧಿಯೊಳ ಗೋಲಾಡಿರಮ್ಮ' ಎಂದು ಶರಣಸತಿ ಲಿಂಗಪತಿಯರ ಸಂಭ್ರಮದ ಮದುವೆಯ ವೈಭವದ ವರ್ಣನೆಯು ತಾತ್ತ್ವಿಕ ರೂಪದಲ್ಲಿ ಹರಿಯುವ ಬಗೆಯನ್ನು ವರ್ಣಿಸಿದ್ದಾರೆ.

ಮುಂದುವರೆದು, ಗುರುಭಜನೆ, ಹರಪೂಜೆ ಮತ್ತು ಒಳ್ಳೆಯ ಕರ್ಮವೃತ್ತಿಯನ್ನು ಮಾಡುವ ಸಾಧಕನ ತನುಮನಗಳ ಭಕ್ತಿಭಾವ ಹೊರಹೊಮ್ಮುವುದನ್ನು ತಿಳಿಸುತ್ತಾರೆ. ಸದು ವಿನಯದ, ಅನ್ಯರಿಗೆ ಹಿತವನ್ನುಂಟುಮಾಡುವ ಒಳ್ಳೆಯ ಅರ್ಥಪೂರ್ಣ ಮಾತುಗಳು ಮತ್ತು ಪಾಪನಾಶ ಮಾಡು ವಂತಹ ಮಂತ್ರಪಠಣದಿಂದ ವಚನದಲ್ಲಿ ಭಕ್ತಿ ಅಳವಡುತ್ತದೆ. ಇದೇ ಮುಂದುವರಿದು, ಕೊನೆಗೆ ಶಾಂತಿ, ಸಂಯಮ, ವಿವೇಕ, ದಯೆ, ವಿರಕ್ತಿ ಮುಂತಾದ ಭಾವಗಳಿಂದ ಆತ್ಮವಿದ್ಯೆ ಯಾಗಿ ಮೂಡಿ, 'ಶಂಭುಲಿಂಗನ ಅಮಳ ರೂಪವನ್ನೆ' ಮನದಲ್ಲಿ ತುಂಬಿಕೊಳ್ಳುವವರೆಗೂ ಭಕ್ತಿ ಬೆಳೆಯುತ್ತದೆ. ಹೀಗೆ ಕಾಯಾ ವಾಚಾ ಮನಸಾ ಶಂಭುಲಿಂಗನ ಬಗ್ಗೆ ಭಕ್ತಿ, ನಿಷ್ಠೆ ಯನ್ನು ತುಂಬಿಕೊಂಡ ಭಕ್ತನು ಹೆಚ್ಚು ಹೆಚ್ಚು ಅಂತರ್ಮುಖಿ ಯಾಗಿ ಯೋಗಿಯ ಮಾರ್ಗದಲ್ಲಿ ನಡೆಯತೊಡಗುತ್ತಾನೆ. ಅದೇ ನಾಲ್ಕನೆಯದಾದ ಯೋಗ ಪ್ರತಿಪಾದನಾ ಸ್ಥಲ.

(ಮುಂದುವರಿಯುವುದು)

**ತಿದ್ದುಪಡಿ**

೨೦೧೨, ಜುಲೈ ತಿಂಗಳ ಸಂಚಿಕೆಯ ಸುದ್ದಿ ಸಂಚಯ ವಿಭಾಗದಲ್ಲಿ (ಪುಟ ೪೧) ಜ್ಞಾನವಾಹಿನಿ ಕಾರ್ಯಕ್ರಮದ ದಿನಾಂಕಗಳು ವ್ಯತ್ಯಾಸವಾಗಿವೆ. ಅವನ್ನು '೨೫. ೬. ೨೦೧೨ ರಿಂದ ೩೦. ೬. ೨೦೧೨ ರವರೆಗೆ' ಎಂದು ಓದಿಕೊಳ್ಳಬೇಕಾಗಿ ವಿನಂತಿ – ಸಂ.



## ಉಪನಿಷನ್ಮಂಜರಿ

'ಕೇನ' ಅಂದರೆ 'ಯಾವುದರಿಂದ' ಎಂಬ ಜಿಜ್ಞಾಸೆಯಿಂದ ಆರಂಭವಾಗುವ ಕೇನೋಪನಿಷತ್ತು ಇಡೀ ವಿಶ್ವಕ್ಕೆ ಆಧಾರವಾದ ಪರತತ್ತ್ವವನ್ನು ಸುಂದರವಾಗಿ ವಿಶದಪಡಿಸುತ್ತದೆ. ಇದರ ಸಾರವನ್ನು ಸರಳವಾಗಿ, ನಿರ್ದಿಷ್ಟವಾಗಿ ತಿಳಿಸಿಕೊಟ್ಟಿರುವ ಲೇಖಕಿ ನಿವೃತ್ತ ಕಾಲೇಜು ಪ್ರಾಂಶುಪಾಲರು. ಸಂಸ್ಕೃತ ವಿದ್ವಾಂಸರಾಗಿರುವ ಇವರು, ಮೈಸೂರು ಶ್ರೀರಾಮಕೃಷ್ಣ ಆಶ್ರಮದ ಭಕ್ತರು; 'ವಿವೇಕಪ್ರಭ' ಪತ್ರಿಕೆಯ ಸ್ವಯಂಸೇವಕರು.

# ಕೇನೋಪನಿಷತ್ತು

ಡಾ. ಕೆ.ಎಲ್. ಪ್ರಸನ್ನಾಕ್ಷಿ

ಮಾನವ, ಮಾನವನಾಗುವುದು ಅರಿವಿನಿಂದ. ಕೇವಲ ಇಂದ್ರಿಯಗಳು ಗ್ರಹಿಸುವ ಅರಿವಿನಿಂದಲ್ಲ. ಯಾವುದೊಂದನ್ನರಿತರೆ ಮತ್ತೇನೂ ಅರಿಯುವುದು ಉಳಿಯುವುದಿಲ್ಲವೋ, ಯಾವುದು ಎಲ್ಲಕ್ಕೂ ಮೂಲವೋ ಅದರ ಅರಿವು ಅವನಿಗೆ ಮಾನವತ್ವವನ್ನು (ಮನು – ಅವಬೋಧನೆ) ತಂದುಕೊಡುವುದು. ಹಾಗಲ್ಲದೆ ಕೇವಲ ಇಂದ್ರಿಯಗಳ ನೆಲೆಯಲ್ಲಿ ಅಥವಾ ಅದನ್ನು ಮೀರಿದ ಪ್ರಾಣದ ನೆಲೆಯಲ್ಲಿ ಅವನ ಅರಿವು ನಿಂತರೆ (ಅಲ್ಲಿ ಅರಿವಿದೆ, ಅನುಭವವಿದೆ, ಆದರೂ), ಅವನು 'ಅಸು–ರ' (ಪ್ರಾಣಗಳ ನೆಲೆಯಲ್ಲಿ – ಪ್ರಾಣ ಇಂದ್ರಿಯ ಮನಸ್ಸುಗಳು ಒಯ್ದೆಡೆಗೆ ಒಯ್ಯಲ್ಪಡುವವನಾಗಿ) ಎನಿಸಿಕೊಳ್ಳುತ್ತಾನೆ. ಅರಿವಿನ ಸೆಲೆಯಾದ, ಎಲ್ಲಕ್ಕೂ ಮೂಲವಾದ, ಪರಿಪೂರ್ಣವಾದ 'ವಸ್ತು' ಯಾವುದು, ಅದರ ಸ್ವರೂಪವೇನು, ಅದನ್ನು ಪಡೆಯುವುದು ಹೇಗೆ, ಅದಕ್ಕೆ ಸಾಧನೆಗಳೇನು? – ಇವೇ ಮೊದಲಾಗಿ ಜಿಜ್ಞಾಸೆ ಮಾಡುವಂಥವೇ ಉಪನಿಷತ್ತುಗಳು. ಇವುಗಳ ಸಂಖ್ಯೆ ನಿರ್ದಿಷ್ಟವಾಗಿಲ್ಲ. ಜ್ಞಾನಿಗಳು, ವಿಮರ್ಶಕರು ಹತ್ತು ಉಪನಿಷತ್ತುಗಳನ್ನು ಪ್ರಧಾನವೆಂದು ಪರಿಗಣಿಸಿದ್ದಾರೆ. ಅವುಗಳಲ್ಲಿ 'ಕೇನ ಉಪನಿಷತ್ತು' ಕೂಡ ಒಂದು.

**'ಕೇನೇಷಿತಂ ಪತತಿ'** ಎಂದು 'ಕೇನ' ಎಂಬ ಪದದಿಂದ ಆರಂಭವಾಗುವುದರಿಂದ, ಈ ಉಪನಿಷತ್ತಿಗೆ ಕೇನೋಪನಿಷತ್ತು ಎಂದು ಹೆಸರು. ಇದು ಸಾಮವೇದದ ಜೈಮಿನಿ ಬ್ರಾಹ್ಮಣದ ೯ನೇ ಮಂಡಲದಲ್ಲಿ ಅಥವಾ ತಲವಕಾರದಲ್ಲಿ ಬರುತ್ತದೆ. ಆದುದರಿಂದ ಇದಕ್ಕೆ **'ತಲವಕಾರೋಪನಿಷತ್ತು'** ಎಂದೂ ಹೆಸರಿದೆ. ಇದರಲ್ಲಿ ನಾಲ್ಕು ಅಧ್ಯಾಯಗಳಿವೆ. ಪ್ರತಿಯೊಂದು ಅಧ್ಯಾಯದ ವಿಷಯವೂ ಪರಸ್ಪರ ಪೂರಕವಾಗಿದೆ.

ಕೇನ ಉಪನಿಷತ್ತು ಆಧ್ಯಾತ್ಮಿಕವಾಗಿ ಬೆಳಕು ಪಡೆದ ಗುರು ಮತ್ತು ಶ್ರದ್ಧೆಯಿಂದ ಕೂಡಿದ ಶಿಷ್ಯನ ನಡುವೆ ನಡೆಯುವ ಸಂವಾದ ರೂಪದಲ್ಲಿದೆ. ಈ ಶಿಷ್ಯ ಬಹಳ ಕಾಲದಿಂದ ಸತ್ಯವನ್ನು ಹುಡುಕುತ್ತಿದ್ದಾನೆ; ಜಗತ್ತನ್ನು ಚೆನ್ನಾಗಿ ಅಧ್ಯಯನ ಮಾಡಿದ್ದಾನೆ; ಈ ವಿಶ್ವ ಬದಲಾವಣೆ ಹೊಂದುವಂತಹುದು, ಕ್ಷಣಿಕವಾದುದು ಎಂದೂ ತಿಳಿದುಕೊಂಡಿದ್ದಾನೆ. ಆದರೆ, ಎಲ್ಲದರ ಹಿಂದೆ ಇರುವ ವಿಶ್ವಾತೀತವೂ, ಸರ್ವಶಕ್ತವೂ, ಅನಂತವೂ, ಅಮರವೂ ಸರ್ವಜ್ಞವೂ ಆದ 'ಏಕತತ್ತ್ವ' ವನ್ನು ಕಂಡು ಅನುಭವಿಸಿ ಅದರೊಡನೆ ಒಂದಾಗುವವರೆಗೂ ಅವನಿಗೆ ಸಂಪೂರ್ಣ ತೃಪ್ತಿಯಿಲ್ಲ. ಆ 'ವಸ್ತು'ವನ್ನು ಕಂಡುಹಿಡಿಯುವುದು ಎಲ್ಲಿ, ಹೇಗೆ – ಈ ಪ್ರಶ್ನೆಗಳು ಅವನನ್ನು ಬಾಧಿಸುತ್ತಿವೆ. ಅದಕ್ಕಾಗಿ ಅವನು ಗುರುವನ್ನು ಪ್ರಶ್ನಿಸುತ್ತಾನೆ. ಹಾಗೆಂದೇ ಈ ಉಪನಿಷತ್ತಿನ ಮೊದಲನೆಯ ಅಧ್ಯಾಯವು, **ತದೇವ ಬ್ರಹ್ಮ ತ್ವಂ ವಿದ್ಧಿ ನೇದಂ ಯದಿದಮುಪಾಸತೇ** – 'ಆ ಏಕ ವಸ್ತುವನ್ನು ಆತ್ಮಕ್ಕೆ ಆತ್ಮವಾದ ಬ್ರಹ್ಮವೆಂದೇ ತಿಳಿದುಕೋ, ಈ ವಿಶ್ವದಲ್ಲಿ ಜನರು ಪೂಜಿಸುವ ನಾನಾ ಉಪಾಸನಾರೂಪಗಳೆಂದು ತಿಳಿಯದಿರು' ಎನ್ನುತ್ತದೆ. ಇದನ್ನೇ ಪಲ್ಲವಿಯಾಗಿಟ್ಟುಕೊಂಡು ಮುಂದಿನ ಭಾಗಗಳು ಬ್ರಹ್ಮತತ್ತ್ವದ ಆಧ್ಯಾತ್ಮಿಕ ಸ್ವರೂಪವನ್ನು ವಿವರಿಸುತ್ತವೆ.

ಇಂದ್ರಿಯಗಳು ತಮಗೆ ತಾವೇ ಯಾವ ಕೆಲಸವನ್ನೂ ನಿರ್ವಹಿಸಲಾರವು; ವಿಷಯಗಳನ್ನು ಗ್ರಹಿಸಲಾರವು. ವಿಷಯ, ಇಂದ್ರಿಯ – ಎರಡೂ ಇದ್ದೂ ಮನಸ್ಸು ಅದರೊಡನೆ ಸೇರದೆ ಹೋದರೆ, ಯಾವುದೇ ವಸ್ತುವಿನ ಜ್ಞಾನವಾಗುವುದಿಲ್ಲ. ಇವು ಮೂರೂ ಇದ್ದು, ಚೈತನ್ಯವೇ ಇಲ್ಲದಿದ್ದರೆ ಅರಿವಿನ ಅಥವಾ ಅನುಭವದ ಪ್ರಶ್ನೆಯೇ ಬರುವುದಿಲ್ಲ. ಇದನ್ನರಿತ ಶಿಷ್ಯನು, "ಈ

ಪ್ರಾಣ, ಮನಸ್ಸು, ಇಂದ್ರಿಯಗಳು ಯಾರ ಇಚ್ಛೆ ಸಂಕಲ್ಪ ನಿಯಮಗಳಿಂದ ಕಾರ್ಯನಿರ್ವಹಿಸುತ್ತವೆ?" ಎಂದು ಗುರುವನ್ನು ಪ್ರಶ್ನಿಸುತ್ತಾನೆ. ಅದಕ್ಕೆ ಉತ್ತರವಾಗಿ ಗುರುವು, "ಇಂದ್ರಿಯಕ್ಕೆ ಇಂದ್ರಿಯವಾಗಿ (ಕಣ್ಣಿಗೆ ಕಣ್ಣು, ಪ್ರಾಣಕ್ಕೆ ಪ್ರಾಣ, ಮನಸ್ಸಿಗೆ ಮನಸ್ಸು), ಎಲ್ಲಕ್ಕೂ ಚೈತನ್ಯದಾಯಕವಾಗಿ ಇರುವ ಪರಾತ್ಪರ ವಸ್ತುವೇ 'ಬ್ರಹ್ಮ'ವೆಂದು ಕರೆಸಿಕೊಳ್ಳುವುದು" ಎನ್ನುತ್ತಾನೆ. ಅದನ್ನು ಇಂದ್ರಿಯಗಳಿಂದಲಾಗಲಿ, ಮನಸ್ಸು ಪ್ರಾಣಗಳಿಂದಲಾಗಲಿ ಅರಿಯಲು ಸಾಧ್ಯವಿಲ್ಲ. ಅದು ಬಾಹ್ಯ ಪ್ರಪಂಚಕ್ಕೆ ಸೇರಿದ ಸ್ಥೂಲವಸ್ತುವಾಗಲಿ ಸೂಕ್ಷ್ಮವಸ್ತುವಾಗಲಿ ಅಲ್ಲ. ನಮ್ಮ ಅರಿವಿನಿಂದ, ಪ್ರಜ್ಞೆಯಿಂದ ಏನೇನನ್ನು ನಾವು ಅರಿಯಬಲ್ಲೆವೋ ಅದಾವುದಕ್ಕೂ ಸಿಲುಕದ, ಅವೆಲ್ಲವನ್ನೂ ಮೀರಿದ, ಬೇರೆಯೇ ಆದ ಒಂದು 'ತತ್ತ್ವ'ವದು. ಅದನ್ನು ಉಪದೇಶ ಮಾಡಲು ಸಾಧ್ಯವಿಲ್ಲ. ಈ ಎಲ್ಲವನ್ನೂ ಸೃಷ್ಟಿಸಿ ಅದನ್ನು ನಡೆಸುತ್ತಿರುವುದೇ 'ಬ್ರಹ್ಮ'. **ಇತಿ ಶುಶ್ರುಮ ಪೂರ್ವೇಷಾಂ ಯೇ ನಃ ತತ್ ವ್ಯಾಚಚಕ್ಷಿರೇ** – "ನಾನು ಬ್ರಹ್ಮನ ಸ್ವರೂಪವನ್ನು ಈ ರೀತಿಯೆಂದು ನನ್ನ ಪೂರ್ವಾಚಾರ್ಯರಿಂದ ಕೇಳಿದ್ದೇನೆ' ಎಂದು ಗುರುವು ಹೇಳುತ್ತಾನೆ. ಋಷಿಯ ಈ ವಿನಯ ಗಮನಾರ್ಹ. ಅನೇಕ ಮಹಾಗ್ರಂಥಗಳನ್ನು ರಚಿಸಿಯೂ ತಮ್ಮ ಸ್ವಂತದ ವಿಷಯವನ್ನೇ ಪ್ರಸ್ತಾಪಿಸದ ಭಾರತೀಯ ಋಷಿಗಳ ವಿನಯವನ್ನು ಸ್ವಾಮಿ ವಿವೇಕಾನಂದರು ತಮ್ಮ ಉಪನ್ಯಾಸಗಳಲ್ಲಿ ಅನೇಕ ಕಡೆ ಎತ್ತಿ ಕೊಂಡಾಡಿದ್ದಾರೆ. ಹಾಗೆಯೇ ಋಷಿಗಳ ಸಂಪ್ರದಾಯನಿಷ್ಠೆಯನ್ನೂ ನಾವು ಗಮನಿಸಬೇಕು. "ಇದು ಕೇವಲ ನಮ್ಮ ನಿಲುವಲ್ಲ, ಗುರುಮುಖೇನ ಬಂದ ಜ್ಞಾನ" ಎಂಬುದನ್ನು ಶಿಷ್ಯನಿಗೆ ಅವರು ಈ ಮೂಲಕ ಮನದಟ್ಟು ಮಾಡಿಕೊಡುತ್ತಾರೆ.

ಎರಡನೆಯ ಅಧ್ಯಾಯವು 'ಬ್ರಹ್ಮಜ್ಞಾನಿ'ಯು ಹೇಗಿರುತ್ತಾನೆ ಎಂಬುದನ್ನು ತಿಳಿಸುತ್ತದೆ. ಅವನು 'ಬ್ರಹ್ಮ'ನನ್ನು ತಾನು ಅರಿತಿದ್ದೇನೆ ಎಂದೂ ಹೇಳಲಾರ, ಅರಿತಿಲ್ಲ ಎಂದೂ ಹೇಳಲಾರ. ಹಾಗೆಯೇ ಆ ಜ್ಞಾನವನ್ನು ವಿವರಿಸಲೂ ಅವನಿಗೆ ಆಗದು. ಅವನ ಸ್ಥಿತಿ ಶ್ರೀರಾಮಕೃಷ್ಣರು ಹೇಳಿದ ಹಾಗೆ, ಸಮುದ್ರವನ್ನು ಅಳೆಯಲು ಹೊರಟ ಉಪ್ಪಿನ ಗೊಂಬೆಯ ಸ್ಥಿತಿಯಾಗುತ್ತದೆ. ಉಪ್ಪಿನ ಗೊಂಬೆ ಕೊನೆಯಲ್ಲಿ ಹೇಗೆ ಸಮುದ್ರದಲ್ಲಿ ಒಂದಾಗಿ ಹೋಗುವುದೋ, ಹಾಗೆಯೇ ಬ್ರಹ್ಮಜ್ಞಾನಿಯು 'ಬ್ರಹ್ಮ'ವನ್ನು ತಿಳಿಯಲಾರ, ತಿಳಿಸಲಾರ. ಅದಕ್ಕೆ ಬದಲಾಗಿ ಅವನು ಅದರಲ್ಲೇ ಒಂದಾಗಿ ಹೋಗುತ್ತಾನೆ. ಆ ಪರತತ್ತ್ವದ ಅನುಭವವು ಮನಸ್ಸು ಮಾತುಗಳಿಗೆ ಸಿಲುಕದ್ದು. ಬ್ರಹ್ಮಜ್ಞಾನ ಪಡೆದವನು ಯಾರಿಗೂ ಯಾವುದಕ್ಕೂ ಅಂಜುವುದಿಲ್ಲ, ಅವನು ಅಮೃತತ್ತ್ವವನ್ನು ಪಡೆಯುತ್ತಾನೆ. **ಇಹ ಚೇದವೇದೀದಥ ಸತ್ಯಮಸ್ತಿ, ನ ಚೇದಿಹಾವೇದೀತ್ ಮಹತೀ ವಿನಷ್ಟಿಃ** – "ಬ್ರಹ್ಮಜ್ಞಾನವನ್ನು ಈಗಲೇ, ಈ ಶರೀರ ಇರುವಾಗಲೇ ಪಡೆಯಬೇಕು. ಇಲ್ಲದಿದ್ದರೆ ಬಹಳ ನಷ್ಟವಾಗುವುದು. ಶರೀರ ಬಿದ್ದು ಹೋದ ಮೇಲೆ ಏನನ್ನೂ ಸಾಧಿಸಲಾಗುವುದಿಲ್ಲ."

ಮೂರನೇ ಅಧ್ಯಾಯ ಒಂದು ಕಥೆಯಿಂದ ಆರಂಭವಾಗುತ್ತದೆ. ಒಮ್ಮೆ ದೇವಾಸುರರಿಗೆ ಯುದ್ಧವಾಗಿ, ದೇವತೆಗಳಿಗೆ ಜಯವಾಗುತ್ತದೆ. ಈ ಜಯವು ತಮ್ಮ ಶಕ್ತಿಸಾಮರ್ಥ್ಯದ ಪ್ರಭಾವದಿಂದಲೇ ಆದುದೆಂದು ದೇವತೆಗಳಿಗೆ ಗರ್ವ ಬರುತ್ತದೆ. **'ಅಸುರ್ಯಾ ನಾಮ ತೇ ಲೋಕಾ'** ಎಂದು ಈಶಾವಾಸ್ಯೋಪನಿಷತ್ತು ಹೇಳುವಂತೆ, ಅಜ್ಞಾನ ಮತ್ತು ಭ್ರಮಾಜ್ಞಾನಗಳು ದೇವತೆಗಳನ್ನು ಕೂಡ ಕತ್ತಲೆಯ ಅಥವಾ ಅಸುರ ಲೋಕದಲ್ಲಿ ಬೀಳಿಸುತ್ತವೆ. ಇದನ್ನು ಶ್ರೀರಾಮಕೃಷ್ಣರು, 'ಅಪಕ್ವ ಅಹಂ' ಎನ್ನುತ್ತಾರೆ. ವಾಸ್ತವವಾಗಿ ದೇವತೆಗಳ ಜಯವೆಂಬುದು ಅವರ ಅಂತರ್ಯಾಮಿಯಾದ ಬ್ರಹ್ಮನ ಸಹಾಯದಿಂದಲೇ ದೊರೆತುದು. ಆದರೆ ದೇವತೆಗಳು ಅದನ್ನು ಸ್ವಪ್ರಯತ್ನದಿಂದ ದೊರಕಿರುವುದೆಂದು ಭ್ರಮಿತರಾದರು; ತಮ್ಮ ಅಂತರ್ಯಾಮಿಯನ್ನು ಮರೆತರು. ಅವರ ಅಜ್ಞಾನವನ್ನು ದೂರಮಾಡಲು, 'ಬ್ರಹ್ಮ'ವು ಒಂದು ದೊಡ್ಡ ಆಕೃತಿಯ ಯಕ್ಷರೂಪದಲ್ಲಿ ಅವರ ಮುಂದೆ ನಿಂತಿತು. ದೇವತೆಗಳು ಅದು ಯಾರೆಂದು ತಿಳಿದುಬರಬೇಕೆಂದು ಮೊದಲಿಗೆ ಅಗ್ನಿಯನ್ನು ಕಳಿಸಿದರು.

ಯಕ್ಷನು ಅಗ್ನಿಯನ್ನು, "ನೀನು ಯಾರು, ನಿನ್ನ ಶಕ್ತಿ ಏನು?" ಎಂದು ಕೇಳಿದನು. ಅಗ್ನಿಯು, "ನಾನು ಅಗ್ನಿ ಅಥವಾ 'ಜಾತವೇದ'; ಈ ಸೃಷ್ಟಿಯಲ್ಲಿ ಏನೇನಿದೆಯೋ ಎಲ್ಲವನ್ನೂ ಅರಿಯಬಲ್ಲೆ, ಸುಡಬಲ್ಲೆ" ಎಂದನು. ಯಕ್ಷ ಅವನ ಮುಂದೆ ಒಂದು ಹುಲ್ಲುಕಡ್ಡಿಯನ್ನು ಇಟ್ಟು, ಅದನ್ನು ಸುಡುವಂತೆ ಹೇಳಿದನು. ಅಗ್ನಿ ತನ್ನೆಲ್ಲಾ ಶಕ್ತಿ ಬಳಸಿದರೂ, ಸುತ್ತಿ ಸುತ್ತಿ ಎಷ್ಟು ವೇಗದಿಂದ ಆಕ್ರಮಣ ಮಾಡಿದರೂ, ಅದನ್ನು ಸುಡಲಾಗಲಿಲ್ಲ. ಅಗ್ನಿಯ ಸ್ಥಿತಿ ಶ್ರೀರಾಮಕೃಷ್ಣರು ಹೇಳುವ ತೋಟದ ಮ್ಯಾನೇಜರ್ ಸ್ಥಿತಿಯಂತೆ ಆಯಿತು. ಸಾಹುಕಾರನ ಮನೆಯ ತೋಟದ ಮ್ಯಾನೇಜರ್, ತೋಟವೆಲ್ಲವೂ ತನ್ನದೇ ಎಂದು ಹೇಳಿಕೊಂಡು ಬೀಗುತ್ತಿದ್ದ. ಆದರೆ ಯಜಮಾನ ಒಮ್ಮೆ ಅವನನ್ನು ಕೆಲಸದಿಂದ ವಜಾಮಾಡಿದಾಗ, ಅವನು ಅಲ್ಲಿಟ್ಟಿದ್ದ ತನ್ನದೇ ಹಳೆಯ ಪೆಟ್ಟಿಗೆಯನ್ನು ಕೂಡ ತೆಗೆದುಕೊಂಡು ಹೋಗಲು ಆಗಲಿಲ್ಲ. ಸರಿ, ಅಗ್ನಿ ಏನೂ ಮಾಡಲಾಗದೆ, ಯಕ್ಷನನ್ನು ತಿಳಿಯಲೂ ಆಗದೆ, ಅಲ್ಲಿಂದಲೇ ದೇವತೆಗಳ ಬಳಿಗೆ ಓಡಿದ. ಅದೇ ರೀತಿ ವಾಯು ಮೊದಲಾದ ದೇವತೆಗಳು ಕೂಡ ಒಬ್ಬೊಬ್ಬರಾಗಿ ಯಕ್ಷನ ಬಳಿ ಬಂದು, ತಮ್ಮ ತಮ್ಮ ಪೌರುಷವನ್ನು ಕೊಚ್ಚಿಕೊಂಡರು. ಆದರೆ ಯಕ್ಷ ಇಟ್ಟ ಹುಲ್ಲಿನ ಮೇಲೆ ಅವರು ಯಾವ ಪ್ರಭಾವವನ್ನೂ ಬೀರಲಾರದೆ, ಯಕ್ಷನನ್ನೂ ಅರಿಯಲಾರದೆ ಹೋದರು.

ಕೊನೆಗೆ ದೇವತೆಗಳ ಒಡೆಯ ಇಂದ್ರನು ಯಕ್ಷನ ಬಳಿ ಹೋದನು. ಆದರೆ ಆ ಸ್ಥಳದಲ್ಲಿ ಯಕ್ಷ ಇರಲಿಲ್ಲ. ಬದಲಾಗಿ ಉಮಾ ಹೈಮವತೀ ಅಲ್ಲಿ ನಿಂತಿದ್ದಳು. ಇಂದ್ರ ಅವಳನ್ನು, "ಇಲ್ಲಿ ನಿಂತಿದ್ದದ್ದು ಯಾವ ಯಕ್ಷ?" ಎಂದು ಕೇಳಿದನು. ಅದಕ್ಕೆ ಉಮಾದೇವಿ, " 'ಬ್ರಹ್ಮ'ವೇ ಆ ಯಕ್ಷ. ಅವನ ಬಲ ಶಕ್ತಿ ಪ್ರಭಾವಗಳಿಂದಲೇ ಎಲ್ಲವೂ ನಡೆಯುತ್ತಿರುವುದು. ದೇವತೆಗಳಾದ